## ವೇಷ ಹಾಕಿಕೊಳ್ಳದೆ ವೇಷ ಹಾಕಿ!

ಡಾ. ಟಿ.ಬಿ. ಸೊಲಬಕ್ಕನವರ ಅವರ ಕನಸಿನ ಕೂಸು ಹಾವೇರಿ ಜಿಲ್ಲೆಯ ಶಿಗ್ಗಾಂವಿನ ಉತ್ಸವ ರಾಕ್ ಗಾರ್ಡನ್. ಇಲ್ಲಿ ಗ್ರಾಮರಾಜ್ಯದ ಪ್ರತಿರೂಪವೇ ಮೈತಳೆದಿದೆ. ಸಂತೆ, ಗ್ರಾಮೀಣ ಮನೆ, ಆಟಗಳು, ಕಸುಬುಗಳು, ಕಲೆ ಎಲ್ಲವೂ ಮೇಳೈಸಿದೆ. ಇದರ ಒಂದು ಭಾಗದಲ್ಲಿ ವೃತ್ತಿ ರಂಗಭೂಮಿಯ ಆಡಿಟೋರಿಯಂ ಇದೆ.

ವೃತ್ತಿರಂಗಭೂಮಿಯ ವಾತಾವರಣವನ್ನು ಕಟ್ಟಿಕೊಡುವ ಸಲುವಾಗಿ ಆಡಿಟೋರಿಯಂನಲ್ಲಿ ಪೌರಾಣಿಕ ನಾಟಕಗಳ ಗಂಡು ಮತ್ತು ಹೆಣ್ಣು ಪಾತ್ರದ ಪ್ರತಿಕೃತಿಗಳನ್ನು ನಿಲ್ಲಿಸಲಾಗಿದೆ. ಅವುಗಳ ಮುಖಗಳ ಜಾಗವನ್ನು ಮಾತ್ರ ಹಾಗೆಯೇ ಖಾಲಿ ಬಿಡಲಾಗಿದ್ದು, ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರು ಖಾಲಿ ಜಾಗದಲ್ಲಿ ಮುಖವನ್ನಿಟ್ಟು ಪೋಸ್ ಕೊಡುತ್ತಾರೆ. ಇಲ್ಲಿಗೆ ಬರುವ ಸಾಕಷ್ಟು ಮಂದಿಯ ಆಕರ್ಷಣೆಯೇ ಈ ಪ್ರತಿಕೃತಿಗಳು. ಸಾಂಪ್ರದಾಯಿಕ ಉಡುಪನ್ನು ತೊಡುವ ಅಭಿಲಾಷೆಯನ್ನು ಪೂರ್ಣಗೊಳಿಸುವುದರ ಜೊತೆಗೆ, ಮುಖಾಭಿನಯವನ್ನೂ ಮಾಡಬಹುದು.

—ಸುಘೋಷ ಸ. ನಿಗಳೆ, ಬೆಂಗಳೂರು



## ಪುಸ್ತಕ ಗೂಡು

75ನೇ ಅಮೃತ ವರ್ಷ ಸ್ವಾತಂತ್ರ್ಯೋತ್ಸವದ ಅಂಗವಾಗಿ ಪುತ್ತೂರು ತಾಲ್ಲೂಕಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈ 'ಪುಸ್ತಕ ಗೂಡು' ಲೋಕಾರ್ಪಣೆ ಆಗಿದೆ. ಕಬಕ, ಉಪ್ಪಿನಂಗಡಿ, ಆರ್ಯಾಪು ಮತ್ತು ನರಿಮೊಗರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸ್ಸು ತಂಗುದಾಣಗಳಲ್ಲಿ 'ಪುಸ್ತಕ ಗೂಡು' ಜ್ಞಾನ ಭಂಡಾರವಾಗಿ ತಲೆಎತ್ತಿದೆ! ವಾರಪತ್ರಿಕೆ, ಮಾಸಿಕ, ಕಾದಂಬರಿ, ನಾಟಕ, ಕವನ, ಕಥಾ ಸಂಕಲನ, ಮಕ್ಕಳ ಪುಸ್ತಕಗಳನ್ನು 'ಪುಸ್ತಕ ಗೂಡು' ಸಂಗ್ರಹಿಸಿದೆ. ದಾನಿಗಳು ಪುಸ್ತಕಗಳನ್ನು ನೀಡಬಹುದಾಗಿದೆ. ಓದುವ ಅಭ್ಯಾಸ ಬೆಳೆಸಲು, ಸಮಯಾವಕಾಶ ಸದುಪಯೋಗಗೊಳಿಸಲು ಉತ್ತಮ ಯತ್ನ. ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಗೂ 'ಪುಸ್ತಕ ಗೂಡು' ಬರಬೇಕಿದೆ! ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ತಾಲ್ಲೂಕುಗಳ 30 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ಮೂವತ್ತಕ್ಕೂ ಹೆಚ್ಚು 'ಪುಸ್ತಕ ಗೂಡು' ಲೋಕಾರ್ಪಣೆಗೊಂಡಿದೆ.

—ಎಸ್.ಎನ್. ಅಮೃತ, ಪುತ್ತೂರು





## ಚಿಟ್ಟೆಗೂ ಇಷ್ಟ ಉಪ್ಪಿನ ಊಟ...

ಚಿಟ್ಟೆಗಳು ಹೂವಿನಿಂದ ಹೂವಿಗೆ ಹಾರುತ್ತಾ ಪ್ರೋಬೊಸಿಸ್(Proboscis) ಎಂದು ಕರೆಯಲ್ಪಡುವ ತಮ್ಮ ಹೀರು ನಳಿಗೆಗಳ ಮೂಲಕ ಮಕರಂದ ಹೀರುವುದು ಸಾಮಾನ್ಯವಾಗಿ ತಿಳಿದೇ ಇದೆ. ಮಕರಂದ ಈ ಚಿಟ್ಟೆಗಳ ಮುಖ್ಯ ಆಹಾರವೂ ಹೌದು. ಕೆಲವೊಮ್ಮೆ, ಈ ಚಿಟ್ಟೆಗಳು ತೇವಾಂಶವುಳ್ಳ ಮಣ್ಣಿನ ಮೇಲೆ ಕೂತು ತಮಗೆ ಅಗತ್ಯವಾದ ಖನಿಜ, ಲವಣಗಳನ್ನು ಹೀರುವುದನ್ನು ಮಡ್ ಪಡ್ಲಿಂಗ್ (Mud puddling) ಎಂದು ಕರೆಯಲಾಗುತ್ತದೆ.

ತೀರಾ ಅಪರೂಪಕ್ಕೆಂಬಂತೆ ಈ ಚಿಟ್ಟೆಗಳು ಮನುಷ್ಯರ ಚರ್ಮದತ್ತ ಆಕರ್ಷಿತವಾಗಿ ಕೈ ಮೇಲೆ ಬಂದು ಕೂರುವುದೂ ಇದೆ. ವಾಸ್ತವವಾಗಿ, ಚಿಟ್ಟೆಗಳು ಮನುಷ್ಯನ ಬೆವರಿನಲ್ಲಿನ ಪೋಷಕಾಂಶಗಳಿಗಾಗಿ, ಸೋಡಿಯಂನಂತಹ ಲವಣಕ್ಕಾಗಿ ಕೈ ಮೇಲೆ ಬಂದು ಕೂರುತ್ತವೆ. ಈ ಬಗ್ಗೆ ವಿವರಗಳನ್ನೆಲ್ಲಾ ತಿಳಿದ ಮರು ದಿನ ಬೆಳಿಗ್ಗೆಯೇ ಚಾಕೊಲೇಟ್ ಪ್ಯಾನ್ಸಿ (Chocolate Pansy) ಹೆಸರಿನ ಚಿಟ್ಟೆ ಕೈ ಮೇಲೆ ಬಂದು ಕೂತು, ಕಚಗುಳಿ ಇಟ್ಟಿತು. ಅದರ ಚಿತ್ರವೇ ಇದು.

—ಪೂರ್ಣೇಶ್ ಮತ್ತಾವರ, ಮೂಡಿಗೆರೆ